ದಿನಾಂಕ 31-10-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಹೆಚ್ ಎನ್ ಎಸ್ ಕೆ ವಕೀಲರಿಂದಃ-

ನನ್ನ ತಂದೆ ಹೆಚ್ ಎಂ ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ದ್ವಿತೀಯ ಪಿಯುಸಿ ವರೆಗೆ ಕಲಿತಿದ್ದರು. ಮೂಡಲಯ್ಯರವರ ಕುಟುಂಬದಲ್ಲಿ ನನ್ನ ತಂದೇ ಒಬ್ಬರೇ ವಿದ್ಯಾವಂತರಾಗಿದ್ದರು ಅಂದರೆ ಸರಿ. ಒಟ್ಟು ಕುಟುಂಬದ ವ್ಯವಹಾರವನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ, ನನ್ನ ತಾತ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಪಂಚಾಯಿತಿ ಪಾರಿಕತ್ ಗೆ ವಾದಿಗಳು ಪಾಟಿ ಅಲ್ಲ. ವಾದಿಗಳಿಗೆ ಮದುವೆ ಕಾಲಕ್ಕೆ ಭಾಗ ಕೊಟ್ಟಿದೆ ಎಂದು ಪಂಚಾಯಿತಿ ಪಾರಿಕತ್ ನಲ್ಲಿ ಬರೆದಿಲ್ಲ. ನಿಡಿ 42 ದಾಖಲೆಯನ್ನು ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು, ವಾದಿಗಳನ್ನು ಪಾಟಿಯಾಗಿ ಮಾಡದೇ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ.

ನಿಡಿ 42ರ ಆಧಾರದ ಮೇಲೆ ಪ್ರತ್ಯೇಕವಾಗಿ ಖಾತೆ ಆಗಿದೆ. ಮ್ಯುಟೇಷನ್ ಆದದ್ದು 1998ರಲ್ಲಿ. ಎಂ ಆರ ಆಗಿರುವುದು ನಿಡಿ 42 ಪಂಚಾಯಿತಿ ಪಾರಿಕತ್ ನ ಆಧಾರದ ಮೇಲೆ, ಮ್ಯುಟೇಷನ್ ನಂಬರ ಗೊತ್ತಿಲ್ಲ. ಸಾಕ್ಷಿಗೆ ನಿಪಿ 7 ನ್ನು ತೋರಿಸಿ ನೀವು ಹೇಳಿದ ಮ್ಯುಟೇಷನ್ ಇದೇನಾ ಎಂದರೆ ಸಾಕ್ಷಿ ನಿಪಿ7 ನ್ನು ಓದಿ ನೋಡಿ ಹೌದು ಎಂದು ನುಡಿಯುತ್ತಾರೆ. ನಿಪಿ 7ರಲ್ಲಿ ದಿನಾಂಕಃ 01.12.1982ರ ಪಾರಿಕತ್ ನ ಪ್ರಕಾರ ಎಂದು ನಮೂದು ಮಾಡಿಲ್ಲ. ಆ ಕಾಲಕ್ಕೆ ನಿಡಿ 42 ಪಂಚಾಯಿತಿ ಪಾರಿಕತ್ ದಾಖಲೆ ಯಾವುದು ಇಲ್ಲದ ಕಾರಣ ನಿಪಿ 7 ರಲ್ಲಿ ನಿಡಿ 42ರ ಬಗ್ಗೆ ನಮೂದು ಮಾಡಿಲ್ಲ ಅಂದರೆ ಸರಿಯಲ್ಲ. ನಾನು ದ್ವಿತೀಯ ಪಿಯುಸಿ ವರೆಗೆ ಕಲಿತಿದ್ದೇನೆ, ನನ್ನ ತಾಯಿ ಎಸ್ ಎಸ್ ಎಲ್ ಸಿ ವರೆಗೆ ಕಲಿತಿದ್ದಾರೆ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಆಗಿರುವುದರಿಂದ ವಾದಿಗಳಿಗೂ ಸಹ ಕಾನೂನಾತ್ಮಕವಾಗಿ ಹಕ್ಕು ಇದೆ ಅಂದರೆ ಸಾಕ್ಷಿ ಇಲ್ಲ ಎಂದು ನುಡಿದು, ನನ್ನ ತಂದೆ ಬದುಕಿದ್ದಾಗಲೇ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ, ಹಣ

ಕೊಟ್ಟಿದ್ದಾರೆಂದು ನುಡಿಯುತ್ತಾರೆ. ಹೆಣ್ಣು ಮಕ್ಕಳಿಗೆ ನನ್ನ ತಂದೆ ಹಣ ಕೊಟ್ಟಿದ್ದಾರೆಂದು ತೋರಿಸಲು ದಾಖಲೆ ಇಲ್ಲ. ವಾದಿಗೆ ನನ್ನ ತಂದೆ ಅಂತಹ ಯಾವುದೇ ಹಣ ಕೊಟ್ಟಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮೃತ 1ನೇ ಪ್ರತಿವಾದಿ ವೆಂಕಟರಮಣಯ್ಯರವರು ಈ ಕೇಸಿನಲ್ಲಿ ಲಿಖಿತ ತಕರಾರು ಸಲ್ಲಿಸಿದ್ದಾರೆ. ಅವರು ಏನೇನು ತಕರಾರು ಸಲ್ಲಿಸಿದ್ದಾರೆಂದು ನನಗೆ ಗೊತ್ತು. ವಾದಿಗಳಿಗೆ ಭಾಗ ತಪ್ಪಿಸುವ ಉದ್ದೇಶದಿಂದ ಅವರಿಗೆ ಭಾಗ ಇಲ್ಲ ಎಂದು ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.